ಊರು ರೋದಿಸಿತು. ಮುಂದೆ ಕಮಲವ್ವ ಆತನನ್ನು ವರಿಸಿ ಬಂದಳು. ಅವರಿಗೆ ಮಕ್ಕಳಾಗಲಿಲ್ಲ. ಮಕ್ಕಳಾಗದಿದ್ದರೆ ಅದು ಒಂದು ದೊಡ್ಡ ವೈಫಲ್ಯವೆನ್ನುವ ರೀತಿಯಲ್ಲಿ ಊರು ನಡೆದುಕೊಳ್ಳುವುದನ್ನು ಕಂಡು ಆಕೆ ಮನೆ ಬಿಟ್ಟು ಹೊರಗೆ ಬರುತ್ತಿರಲಿಲ್ಲ. ಎಲ್ಲರೂ ಅದೇ ಪ್ರಶ್ನೆ ಕೇಳುವರು.

ಒಂದು ದಿನ ಮದುವೆ ದಿಬ್ಬಣದ ಟ್ರ್ಯಾಕ್ಟರ್ ಅಪಘಾತಕ್ಕೀಡಾಯಿತು. ನಾಲ್ಕು ಮಂದಿ ಸ್ಥಳದಲ್ಲಿಯೇ ಮೃತಪಟ್ಟರು. ಅದರಲ್ಲಿ ಕಮಲವ್ವನೂ ಒಬ್ಬಳು. ಒಂದು ವರ್ಷವಾಗುವ ಮೊದಲು ಶಿವಪುತ್ರಪ್ಪ ಸಂಬಂಧಿಕಳಾದ ರುದ್ರವ್ವನನ್ನು ಸೊಗಲ ಸೋಮೇಶ್ವರದಲ್ಲಿ ಮದುವೆಯಾದರೆಂಬ ಸುದ್ದಿ ಬಂದಿತು. ಆದರೆ ರುದ್ರವ್ವ ಇವರೊಟ್ಟಿಗೆ ಒಂದು ವರ್ಷ ಕೂಡ ಇರಲಿಲ್ಲ. ಇಪ್ಪತ್ತೈದರ ಹರೆಯದ ಆಕೆಯನ್ನು ಮದುವೆಯಾದದ್ದು ಅರವತ್ತು ವರ್ಷ ವಯಸ್ಸಿನ ಈ ವೃದ್ಧನದೇ ತಪ್ಪು ಎಂದು ಮಕ್ಕಳು ಕೂಡ ಹೇಳಬಹುದಿತ್ತು! ಮುಂದೆ ಆಳುಗಳನ್ನು ಇಟ್ಟುಕೊಂಡು ಒಕ್ಕಲುತನ ಮಾಡಲು ಸುರು ಮಾಡಿದ. ಸಂಬಂಧಿಕರು ಆಸ್ತಿಯ ಸಲುವಾಗಿ ಇವನ ಹತ್ತಿರ ಬರುತ್ತಿದ್ದರೇ ಹೊರತು ನಿಜವಾದ ಕಾಳಜಿಯಿಂದಲ್ಲ. ಮುಂದೆ ಆತ ತನ್ನ ಏಕಾಂಗಿತನ ಕಳೆಯಲು ಬೈಲಹೊಂಗಲ, ಬೆಳಗಾವಿ, ದಾವಣಗೆರೆಗಳಿಗೆ ಹೋಗುತಿದ್ದರೆಂಬ ಸುದ್ದಿ ಬರುತ್ತಿತ್ತು. ಒಂದು ದಿನ ಏಕಾಏಕಿ ಬೈಲಹೊಂಗಲದ ಮಹಿಳೆಯೊಬ್ಬಳು ಇವರ ಮನೆಯಲ್ಲಿ ಬಂದು ಇರತೊಡಗಿದಳು. ಆಕೆಯೂ ವಿಧವೆಯಂತೆ. ಶ್ರೀಮಂತರ ಸಹವಾಸ ತಮಗೇಕೆ? ಯಾರೂ ಹೆಚ್ಚಿನ ವಿಚಾರ ಕೇಳಲಿಲ್ಲ.

ಶಿವಪುತ್ರಪ್ಪನ ಸಾಹಸಗಳು ಏನಾದರೂ ಇದ್ದದ್ದೇ ಎಂದು ಊರಿಗೆ ಗೊತ್ತಿತ್ತು. ಹಾಗಾಗಿ ಅದು ಆಶ್ಚರ್ಯದ ಮಾತಾಗಿರಲಿಲ್ಲ. ಈಗೀಗ ಆತ ಬೈಲಹೊಂಗಲದಲ್ಲಿಯೇ ಮನೆ ಮಾಡಿ ಅಲ್ಲಿಯೆ ಇರುತ್ತಿದ್ದ. ಒಂದು ಸಲ ಊರಿನ ಜನ ಸೇರಿದ್ದ ಯಾವುದೋ ಕಾರ್ಯಕ್ರಮದಲ್ಲಿ ಶಿವಪುತ್ರ ಕಾಕಾ ಮಾತಿಗೆ ಬಂದು ಹೇಳಿದ: 'ಯಾಕೋ ಒಂಟಿತನ ಕಾಡಲಿಕ್ಕೆ ಹತ್ತಿತ್ತು. ಏನೋ ಮದುವಿ ಆಗಬೇಕಂತ ಅನಿಸ್ತು. ಬೈಲಹೊಂಗಲದ ನಾ ಬಾಡಿಗೆ ಇರೋ ಮನೆಯ ಬಾಜೂನೆ ಈ ಮಹಿಳೆ ಇದ್ದರು. ಪರಿಚಯ ಆದರು. ಊರ ಆಶೀರ್ವಾದ ಇರಲಿ.'



ಶಿವಪುತ್ರಪ್ಪ ಮಲ್ಲೂರಿಗೆ ಬಂದರೂ ಅವಳು ಬರುತ್ತಿರಲಿಲ್ಲ. ಆತನೂ ಊರಿಗೆ ಬರುವುದು ಕಡಿಮೆಯಾಯಿತು. ಒಂದೆರಡು ವರ್ಷಗಳಲ್ಲಿ ಅವನು ತನ್ನ ಎತ್ತುಗಳನ್ನು ಮಾರಿದ. ಯಾರೂ ದೇಖರೇಖಿ ಮಾಡುವವರು ಇಲ್ಲ, ರೆಂಟೆ ಕುಂಟೆ ಬಾಡಿಗೆ ಹೊಡೆಸಿದರಾಯಿತು ಎನ್ನುವ ಮಾತು ಕೇಳಿಬಂತು. ಸಂಬಂಧಿಕರು ಕೇಳಿದರೆ ಕೊಡಲಿಲ್ಲವಂತೆ. ಮುಂದೆ ಒಂದೆರಡು ವರ್ಷದಲ್ಲಿ ಶಿವಪುತ್ರಪ್ಪನ ಎಲ್ಲ ಹೊಲಗಳು ಸಹ ಮಾರಾಟವಾದವು. ಮನೆಗಳು ಸಹ ಕಡಿಮೆ ದರದಲ್ಲಿ ಮಾರಾಟವಾದವು. ಅವನ ಕುರಿತಾದ ಪ್ರತಿ ಸುದ್ದಿಯೂ ನಾಲ್ಕೈದು ತಿಂಗಳಾದ ಮೇಲೆ ತಿಳಿಯುತ್ತಿತ್ತು. ದುಂಡಪ್ಪಕಾಕಾನಿಗೆ ಹೊಂಗಲದಲ್ಲಿ ಸಿಗುತ್ತಿದ್ದನಂತೆ. ದುಂಡಪ್ಪಕಾಕಾ ಒಂದು ದಿನ ಶಿವಪುತ್ರಪ್ಪನ ಸುದ್ದಿ ಹೇಳಿದ: 'ನೋಡ್ರಿ, ಆಸ್ತಿ ಅನ್ನೋದು ಕೈಬಿಟ್ಟು ಹೋಗಾಕ ಬಾಳ ಹೊತ್ತು ಬೇಕಾಗಿಲ್ಲ. ಅದಕ್ಕೆ ಶಿವಪುತ್ರಪ್ಪನೆ ಒಂದು ದೊಡ್ಡ ಉದಾಹರಣೆ. ಅಂವನು ಬೈಲಹೊಂಗಲದ ಕ್ಲಬ್ಬಿನ್ಯಾಗ ಇಸ್ಪೀಟು ಆಟ ಆಡಿ ಎಲ್ಲ ದುಡ್ಡು ಕಳಕೊಂಡಂತ. ಅಷ್ಟೆಲ್ಲ ಬಂಗಾರ ಎಲ್ಲಿ ಹೋತು? ಯಾರಿಗೂ ಗೊತ್ತಿಲ್ಲ. ಜೀವನದಾಗ ಒಮ್ಮೊಮ್ಮೆ ಭಾಳ ರಹಸ್ಯ ಇರ್ತವ. ಮರಳಿ ಮಲ್ಲೂರಿಗೆ ಹೋಗೋಣ ಬಾ ಎಂದು ಹೆಂಡತಿಯನ್ನು ಕರೆದನಂತೆ.

'ನೀವು ಗಂಡಸರು ಎಷ್ಟು ಸರಳ ಹೇಳಿಬಿಡ್ತೀರಿ. ಅಲ್ಲ, ಅಲ್ಲಿ ಹೋಗಿ ನನ್ನ ನಡುಬೀದಿಯೊಳಗ ನಿಲ್ಲಿಸಬೇಕಂತ ಮಾಡಿಯೇನು? ನೀನು ಹೀಂಗ ರೊಕ್ಕ ಹಾಳು ಮಾಡಾಂವ, ಏನ್ ಬೇಕಾದ್ದನ್ನು ಒತ್ತೆ ಇಡಾಂವಂತ ಮೊದಲ ಗೊತ್ತಿದ್ರ ನಾ ನಿನ್ನ ಮದುವೀನ ಆಗ್ತಿರಲಿಲ್ಲ. ನನಗ ನೀನು ಎಷ್ಟು ದೊಡ್ಡ ದೋಖಾ ಮಾಡೀದಿ. ನಿನ್ನ ಘಡಾಘಡಾ ಹೊಡಿಬೇಕಂದ್ರೂ ವಯಸ್ಸಾದಾಂವ ಅದೀ ಅಂತ ಪಾಪ ಅನಿಸ್ತೇತಿ.'

ಆಕೆ ತವರುಮನೆಗೆ ಆಶ್ರಯ ಬಯಸಿ ಹೋದಳು. ತಾನು ಎಷ್ಟೆಲ್ಲ ತಪ್ಪು ಮಾಡಿದೆನೆಂದು ಶಿವಪುತ್ರಪ್ಪನಿಗೆ ಈಗ ಪಶ್ಚಾತ್ತಾಪ ಆಗಿದೆ. ದುಂಡಪ್ಪಕಾಕಾನ ಕಾಲು ಮುಟ್ಟಿ ನಮಸ್ಕಾರ ಮಾಡಲು ಹೋದ. 'ಕಾಕಾ, ಇದನ್ನೇನು ಮಾಡ್ತೀದಿ ಬಿಡು. ನಿನ್ನ ಕಡೀ ದಿನಾನ ನೆಮ್ಮದಿಯಿಂದ ಊರಾಗ ಕಳೀಲಿ ಅಂತ ಕರಕೊಂಡೆ ಬಂದೇನಿ.' ದುಂಡಪ್ಪ ಇಲ್ಲದಿದ್ದರೆ ತಾನು ಬೈಲಹೊಂಗಲದ ಬಸ್‌ಸ್ಟ್ಯಾಂಡಿನಲ್ಲಿ ಭಿಕ್ಷೆ ಬೇಡಬೇಕಾಗುತ್ತಿತ್ತೆಂದು ಕೊರಗುವನು. ಇತ್ತೀಚೆಗೆ ಶಿವಪುತ್ರಪ್ಪ ಬಹಳ ಬದಲಾಗಿದ್ದಾನೆ. ನೋಡಲು ಮೊದಲಿಗಿಂತ ಚೆನ್ನಾಗಿ ಆಗಿದ್ದಾನೆ. ಹಿಂದಿನದನ್ನು ಏನೇ ಕೇಳಿದರೂ ಸುಮ್ಮನೆ ನಗುತ್ತಾನೆ. ದೇವಪ್ಪ ಮತ್ತು ಅನುಸೂಯಳ